# ಸ್ವರ್ಣ ಜಯಂತಿ ಗ್ರಾಮ ಸ್ವರೋಜ್ಗಾರ್ ಯೋಜನೆ

ಕೇಂದ್ರ ಪ್ರಾಯೋಜಿತ ಸ್ವರ್ಣಜಯಂತಿ ಗ್ರಾಮ ಸ್ವರೋಜ್ಗಾರ್ ಯೋಜನೆಯು ದಿನಾಂಕ: 01–04–1999 ರಿಂದ ಜಾರಿಗೆ ಬಂದಿದೆ. ಇದರಲ್ಲಿ ಐ.ಆರ್.ಡಿ.ಪಿ., ಟ್ರೈಸಂ, ಡ್ವಾಕ್ರಾ, ಗ್ರಾಮೀಣ ಕುಶಲ ಕರ್ಮಿಗಳಿಗೆ ಸುಧಾರಿತ ಟೂಲ್ ಕಿಟ್‌ಗಳ ಸರಬರಾಜು ಹಾಗೂ ಗಂಗಾಕಲ್ಯಾಣ ಮುಂತಾದ ಯೋಜನೆಗಳನ್ನು ಸಂಯೋಜಿಸಿ, ಕುಟುಂಬದ ಸಮಗ್ರವಾದ ಅಭಿವೃದ್ಧಿಗೆ ಈ ಯೋಜನೆಯನ್ನು ಜಾರಿಗೊಳಿಸಲಾಗಿದೆ.

ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಸ್ವರೋಜ್ಗಾರಿಗಳಲ್ಲಿ ಈ ಕಾರ್ಯಯೋಜನೆಯಂತೆ ಯಾರು ಮುಂದೆ ಬರುತ್ತಾರೆಯೋ ಅಂತಹವರನ್ನು ಗುರುತಿಸಿ ಸ್ವಸಹಾಯ ಸಂಘಗಳ ರಚನೆ ಮೂಲಕ ಲಭ್ಯವಿರುವ ಸವಲತ್ತುಗಳನ್ನು ಪಡೆದುಕೊಂಡು ಬಡತನ ರೇಖೆಗಿಂತ ಮೇಲೆ ಬರುವಂತೆ ಮಾಡುವುದೇ ಈ ಯೋಜನೆಯ ಉದ್ದೇಶವಾಗಿರುತ್ತದೆ.

## ಪ್ರಮುಖ ಲಕ್ಷಣಗಳು:

1. ಹೆಚ್ಚಿನ ಸಂಖ್ಯೆಯಲ್ಲಿ ಸಣ್ಣ ಉದ್ದಿಮೆಗಳನ್ನು ಸ್ಥಾಪಿಸಿ ಗ್ರಾಮೀಣ ಬಡವರುಗಳ ಸಾಮರ್ಥ್ಯ ವೃದ್ದಿಸುವುದು.
2. ಸ್ವರೋಜ್ಗಾರಿಗಳು ವೈಯಕ್ತಿಕ ಉದ್ದಿಮೆದಾರರಾಗಿರಬಹುದು ಅಥವಾ ಸ್ವಸಹಾಯ ಗುಂಪುಗಳಾಗಿರಬಹುದು. ಕ್ರಮೇಣ ಗುಂಪುಗಳಿಗೆ ಆದ್ಯತೆ ನೀಡಲಾಗುವುದು. ಮಹಿಳಾ ಗುಂಪುಗಳಿಗೆ ಪ್ರಾಧಾನ್ಯತೆ.
3. ನೆರವು ಪಡೆದ ಕುಟುಂಬಗಳು ನಿರಂತರವಾಗಿ ಗಣನೀಯ ಆದಾಯ ಪಡೆದು ಬಡತನ ರೇಖೆಗಿಂತ ಮೇಲೆ ಬರಬೇಕು.
4. ಈ ಯೋಜನೆಯ ಸ್ವಯಂ ಉದ್ಯೋಗದ ಎಲ್ಲಾ ಅಂಶಗಳನ್ನು ಒಳಗೊಂಡಿರುವ ಬಹುವ್ಯಾಪ್ತಿಯ ಮಹತ್ವದ ಕಾರ್ಯಕ್ರಮವಾಗಿದೆ. ಅಂದರೆ ಸ್ವರೋಜ್ಗಾರಿಗಳ ಸಂಘಟನೆ ಮತ್ತು ಅದರ ಸಾಮರ್ಥ್ಯ ಅಭಿವೃದ್ಧಿ ಮೂಲಭೂತ ಸೌಕರ್ಯಗಳ ನಿರ್ಮಾಣ, ಗ್ರಾಮೀಣ ತಾಂತ್ರಿಕತೆ, ಸಾಲ ಮತ್ತು ಮಾರುಕಟ್ಟೆ ಒದಗಿಸುವುದು.
5. ಕ್ಲಸ್ಟರ್ ಪದ್ಧತಿಗೆ ಆದ್ಯತೆ. ತಾಲ್ಲೂಕಿನಲ್ಲಿ 45 ಪ್ರಮುಖ ಚಟುವಟಿಕೆಗಳನ್ನು ಆಯ್ಕೆ ಮಾಡಬೇಕು (ಸಾಮಾನ್ಯವಾಗಿ ಜನಪ್ರಿಯವಾಗಿರುವ ಹಾಘೂ ವಾಡಿಕೆಯಲ್ಲಿರುವ ಚಟುವಟಿಕೆಗಳು) ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಸಮಿತಿ ಹಾಘೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಮಿತಿ ಡಿ.ಆರ್.ಡಿ.ಎ. ಇದಕ್ಕೆ ಒಪ್ಪಿಗೆ ನೀಡಬೇಕು.
6. ಬ್ಯಾಂಕ್ ಮತ್ತು ಇಲಾಖಾಧಿಕಾರಿಗಳು ಜಂಟಿ ಯೋಜನಾ ವರದಿಯನ್ನು ತಯಾರಿಸಬೇಕು ಹಾಗೂ ಈ ಮೂಲಕ ಮಂಜೂರಾತಿಯ ವಿಳಂಬವನ್ನು ತಡೆಯಲು ಮತ್ತು ಪೂರ್ಣ ಪ್ರಮಾಣದಲ್ಲಿ ಸಾಲ ಮತ್ತು ಸಹಾಯಧನವನ್ನು ಒದಗಿಸಲು ಸಾಧ್ಯವಾಗುವುದು.

7. ಗುಂಪು ಚಟುವಟಿಕೆಗಳಿಗೆ ಹಾಲಿ ಇರುವ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿ, ಸಂದಿಗ್ದ ಕೊರತೆ ಕಂಡು ಬಂದಲ್ಲಿ ಇದನ್ನು ನಿವಾರಿಸಲು ಕಾರ್ಯಕ್ರಮದ ಹಂಚಿಕೆಯ ಶೇ.20 ಭಾಗ ಮಿತಿಗೊಳಪಟ್ಟು ಅನುದಾನವನ್ನು ಉಪಯೋಗಿಸಬಹುದು.
8. ಗ್ರಾಮ ಸಭೆ ಬಿ.ಪಿ.ಎಲ್. ಪಟ್ಟಿಗೆ ನೀಡುತ್ತದೆ. ಕುಟುಂಬಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆ ಪ್ರತ್ಯೇಕವಾಗಿ ನಡೆಯುತ್ತದೆ.
9. ಸಾಲ ನೀಡುವ ಆರ್ಥಿಕ ಸಂಸ್ಥೆಗಳು ಅವಶ್ಯಕತೆಯನ್ನು ಜಾಗರೂಕತೆಯಿಂದ ನಿರ್ಧರಿಸಿ, ಒಂದಕ್ಕಿಂತ ಹೆಚ್ಚು ಸಲ ಸಾಲ ಒದಗಿಸಬಹುದಾಗಿದ್ದು, ಸ್ವರೋಜ್ಗಾರಿಗಳು ನಿರಂತರವಾಗಿ ಚಟುವಟಿಕೆಯನ್ನು ವೃದ್ಧಿಪಡಿಸಿಕೊಳ್ಳಲು ಪ್ರೋತ್ಸಾಹಿಸಲಾಗುವುದು.
10. ಬೇಸಿಕ್ ಓರಿಯಂಟೇಷನ್ ಹಾಗೂ ಕೌಶಲ್ಯ ನೈಪುಣ್ಯದ ಸುಧಾರಣೆಗೆ ನುರಿತ ತರಬೇತಿ ನೀಡಲಾಗುವುದು.
11. ಮಾರುಕಟ್ಟೆಗಳ ತಿಳುವಳಿಕೆ, ಮಾರುಕಟ್ಟೆಗಳ ಅಭಿವೃದ್ಧಿ ಸಲಹಾ ಸೇವೆಗಳು ಇತ್ಯಾದಿ ಸೌಲಭ್ಯಗಳಿಗೆ ಅವಕಾಶವಿರುತ್ತದೆ.
12. **ಸಾಲ ಮತ್ತು ಸಹಾಯಧನ:** ಸಾಲ ಮಹತ್ವದ ಅಂಶ. ಸಹಾಯಧನವು ಸಹಕಾರಿ ಅಂಶವಾಗಿರುತ್ತದೆ. ಶೇ.30 ಸಹಾಯಧನ ಗರಿಷ್ಠ ರೂ. 7,500–00, ಪರಿಶಿಷ್ಟ ಜಾತಿ ವರ್ಗಕ್ಕೆ ಶೇ.50 ಸಹಾಯಧನ ಮಿತಿ ರೂ. 10,000–00, ಸ್ವಸಹಾಯ ಗುಂಪುಗಳಿಗೆ ಶೇ.50 ಸಹಾಯಧನ ಗರಿಷ್ಠ ಮಿತಿ ಪ್ರತಿ ರೋಜ್ಗಾರರಿಗೆ ರೂ. 10,000–00 ಅಥವಾ ರೂ. 1,25,000–00 ಇವೆರಡರಲ್ಲಿ ಯಾವುದು ಕಡಿಮೆ ಇದೆಯೋ ಅದು ನೀರಾವರಿ ಚಟುವಟಿಕೆಗೆ ಸಹಾಯಧನದ ಮಿತಿ ಇರುವುದಿಲ್ಲ. ಸಹಾಯಧನವನ್ನು ಕೊನೆಯ ಕಂತುಗಳಲ್ಲಿ ಹೊಂದಾಣಿಕೆ ಮಾಡಲಾಗುತ್ತದೆ.
13. **ದುರ್ಬಲ ವರ್ಗದವರಿಗೆ ಆದ್ಯತೆ:** ಪರಿಶಿಷ್ಟ ಜಾತಿ ವರ್ಗಕ್ಕೆ ಶೇ.50 ಗುರಿ, ಮಹಿಳೆಯರಿಗೆ ಶೇ.40 ಮತ್ತು ಅಂಗವಿಕಲರಿಗೆ ಶೇ.3 ರಷ್ಟು ಅವಕಾಶ.
14. ಶೇ. 15 ಅನುದಾನ ಕೇಂದ್ರ ಸರ್ಕಾರದಲ್ಲಿದ್ದು ಪರ್ಯಾಯ ಕಾರ್ಯತಂತ್ರ ಜ್ಞಾನಾಭಿವೃದ್ಧಿ ಪೂರಕ ಮೂಲಭೂತ ಸೌಕರ್ಯಗಳಿಗೆ ಅವಕಾಶವಿದೆ.
15. ಅನುದಾನದಲ್ಲಿ ಕೇಂದ್ರ ಮತ್ತು ರಾಜ್ಯದ ಪಾಲು 75:25 ಆಗಿರುತ್ತದೆ.

## ಸ್ವರೋಜ್ಗಾರಿಗಳು:

ಗುಂಪಿಗೆ ಆದ್ಯತೆ ಗ್ರಾಮ ಸಭೆ ಫಲಾನುಭವಿಗಳನ್ನು ಗುರುತಿಸುತ್ತದೆ.

## ಸ್ವಸಹಾಯ ಗುಂಪುಗಳು:

ಬಡತನ ರೇಖೆಗಿಂತ ಕೆಳಗೆ ವಾಸಿಸುತ್ತಿರುವ ಗ್ರಾಮೀಣ ಪ್ರದೇಶದ ಸಮಾನ ಸಾಮಾಜಿಕ, ಆರ್ಥಿಕ ಮತ್ತು ಮಾನಸಿಕವಾಗಿ ಪರಸ್ಪರ ವಿಶ್ವಾಸದಿಂದ ಕೂಡಿದ 10–20 ಜನರು ಸೇರಿ ತಮ್ಮ ಆರ್ಥಿಕ ಅಭಿವೃದ್ಧಿಗಾಗಿ ಸ್ವ ಇಚ್ಛೆಯಿಂದ ರಚಿಸಿಕೊಂಡ ಗುಂಪಿಗೆ ಸ್ವಸಹಾಯ ಗುಂಪು ಎಂದು ಕರೆಯಲಾಗುವುದು.

## ಸ್ವಸಹಾಯ ಗುಂಪು ರಚನೆ ಪ್ರಾರಂಭ 3 ಹಂತಗಳಲ್ಲಿ ನಡೆಯುತ್ತದೆ.

1ನೇ ಹಂತ: ಗುಂಪಿನ ರಚನೆ, ಸ್ವಯಂ ನಿರ್ವಹಣಾ ಸಾಮರ್ಥ್ಯ ಅವರಲ್ಲಿರಬೇಕು.

2ನೇ ಹಂತ: ಸುತ್ತುನಿಧಿ, ಕೌಶಲ್ಯಾಭಿವೃದ್ಧಿ, ನಿರ್ವಹಣಾ ತಂತ್ರಜ್ಞಾನದಿಂದ ತಮ್ಮ ಚಟುವಟಿಕೆಗಳ ನಿರ್ವಹಣೆ ಮೊದಲನೆಯ ಗ್ರೇಡಿಂಗ್ ನಂತರ.

3ನೇ ಹಂತ: ಸಾಲವನ್ನು ಪಡೆದು ಆರ್ಥಿಕ ಚಟುವಟಿಕೆಗಳನ್ನು ಪ್ರಾರಂಭಿಸಬೇಕು ಎರಡನೇ ಗ್ರೇಡಿಂಗ್ ನಂತರ.

1. ಗುಂಪಿನ 10–20ರಷ್ಟು ಸದಸ್ಯರಿರಬೇಕು. ಸಣ್ಣ ನೀರಾವರಿ ಅಥವಾ ಅಂಗವಿಕಲ ವ್ಯಕ್ತಿಗಳ ಗುಂಪಿನಲ್ಲಿ ಕನಿಷ್ಠ 5 ಜನ ಸದಸ್ಯರಿರಬಹುದು.

2. ಎಲ್ಲರೂ ಬಿ.ಪಿ.ಎಲ್. ಕುಟುಂಬಕ್ಕೆ ಸೇರಿದವರಾಗಿರಬೇಕು. ಆದಾಗ್ಯೂ ಈಗಾಗಲೇ ರಚನೆಯಾಗಿರುವ ಗುಂಪುಗಳಲ್ಲಿ ಶೇ.20 ಭಾಗ ಮತ್ತು ವಿಶೇಷ ಸಂದರ್ಭಗಳಲ್ಲಿ ಶೇ. 30 ಭಾಗ, ಎ.ಪಿ.ಎಲ್. ಕುಟುಂಬಕ್ಕೆ ಸೇರಿದವರಾಗಿರಬಹುದು.

3. ಗುಂಪು ತನ್ನ ನೀತಿ ಸಂಹಿತೆಯನ್ನು ರಚಿಸಿ ಅದರಂತೆ ಕಾರ್ಯ ಚಟುವಟಿಕೆ ನಡೆಸಬೇಕು ಹಾಗೂ ವಾರಕ್ಕೊಮ್ಮೆ ಸಭೆ ಸೇರಬೇಕು. ಪ್ರತಿ ಸದಸ್ಯರು ಸಕ್ರಿಯವಾಗಿ ಸಂಕೋಚವಿಲ್ಲದೆ ಚರ್ಚೆಯಲ್ಲಿ ಭಾಗವಹಿಸಿ ತೀರ್ಮಾನಗಳನ್ನು ಕೈಗೊಳ್ಳಬೇಕು.

## ಸರ್ಕಾರೇತರ ಸಂಸ್ಥೆಗಳ ಪಾತ್ರ:

ಸರ್ಕಾರೇತರ ಸಂಸ್ಥೆಗಳ ಸೇವಾ ಮನೋಭಾವದಿಂದ ಗುಂಪು ರಚನೆ, ಸಂಘಟನೆ ಪರಿಣಾಮಕಾರಿಯಾಗಲು ಸಾಧ್ಯವಿದೆ. ಗುಂಪುಗಳ ಸಾಮರ್ಥ್ಯವನ್ನು ನಿಗದಿತ ಅವಧಿಯಲ್ಲಿ ಬೆಳೆಸುವ ಇಂತಹ ಸಂಸ್ಥೆಗಳಲ್ಲಿರಬೇಕು.

## ಬ್ಯಾಂಕುಗಳ ಪಾತ್ರ:

ಬ್ಯಾಂಕುಗಳನ್ನು ಪ್ರಾರಂಭದಿಂದಲೇ ಪ್ರತಿಯೊಂದು ಪ್ರಕ್ರಿಯೆಗಳಲ್ಲಿ ತೊಡಗಿಸಬೇಕು. ಅವರ ಪಾತ್ರ ಎಲ್ಲರಿಗಿಂತಲೂ ಜಾಸ್ತಿ ಮತ್ತು ಮಹತ್ವವುಳ್ಳದ್ದಾಗಿರುತ್ತದೆ.

## ಆರ್ಥಿಕ ಚಟುವಟಿಕೆಗಳು:

ಸ್ವಸಹಾಯ ಗುಂಪುಗಳ ಎರಡನೆಯ ಗ್ರೇಡಿಂಗ್ ಅನ್ನು ಯಶಸ್ವಿಯಾಗಿ ಪೂರೈಸಿದ ಮೇಲೆ ಅದು ಆರ್ಥಿಕ ಚಟುವಟಿಕೆಗಳಿಗೆ ಸಾಲಸೌಲಭ್ಯ ಪಡೆಯಲು ಅರ್ಹತೆಯನ್ನು ಹೊಂದುತ್ತದೆ. ಗುಂಪುಗಳ ವ್ಯಕ್ತಿಗಳಿಗೆ ಅಥವಾ ಗುಂಪಿನ ಹೆಸರಿಗೆ ಸಾಲ ಪಡೆಯಬಹುದು. ಆದರೆ ಇದರ ಪರಿಶೀಲನೆ ಮಾತ್ರ ಇಡೀ ಗುಂಪಿನ ಜವಾಬ್ದಾರಿಯಾಗಿರುತ್ತದೆ.

## ಸ್ವರೋಜ್ಗಾರಿಗಳ ಆಯ್ಕೆ:

ಗ್ರಾಮ ಸಭೆಯಲ್ಲಿ ಅನುಮೋದನೆಗೊಂಡಿರುವ ಬಿ.ಪಿ.ಎಲ್. ಜನಗಣತಿಯಿಂದ ಗುರುತಿಸಲಾದ ಬಿ.ಪಿ,ಎಲ್. ಕುಟುಂಬಗಳ ಪಟ್ಟಿಯಿಂದ ಸ್ವರೋಜ್ಗಾರಿಗಳ ಮತ್ತು ಸ್ವಸಹಾಯ ಗುಂಪುಗಳನ್ನು ಆಯ್ಕೆ ಮಾಡಲಾಗುವುದು. ಗ್ರಾಮ ಸಭೆಯಲ್ಲಿ ಆಯ್ಕೆ ಪರಿಪೂರ್ಣವಾಗಿರುವುದಿಲ್ಲ. ಎಲ್ಲರೂ ಭಾಗವಹಿಸದೇ ಇರುವುದರಿಂದ ಅದಕ್ಕಾಗಿ ಕೆಳಗಿನಂತೆ ಸಮಿತಿ ಇರಬೇಕು.

1. ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಅವರ ಪ್ರತಿನಿಧಿ
2. ಬ್ಯಾಂಕ್ ಅಧಿಕಾರಿಗಳು
3. ಗ್ರಾಮ ಪಂಚಾಯಿತಿಯ ಅಧ್ಯಕ್ಷರು

## ಸಾಲ ನೀಡಿಕೆ:

ಯೋಜನೆಗೆ ನೀಡುವ ಸಾಲದ ಮೊತ್ತವು ಯೋಜನೆಯ ಸ್ವರೂಪದ ಮೇಲೆ ಅವಲಂಬಿಸಿರುತ್ತದೆ ಮತ್ತು ಇದು ಸಂಯುಕ್ತ ಸಾಲವಾಗಿರತಕ್ಕದ್ದು. ಭದ್ರತೆ ಮತ್ತು ಬಡ್ಡಿದರಗಳು ಕಾಲಕಾಲಕ್ಕೆ ರಿಜರ್ವ್ ಬ್ಯಾಂಕು, ನಬಾರ್ಡ್ ಪ್ರಕಟಿಸುವ ರೀತಿಯಲ್ಲಿರುತ್ತದೆ.

## ಸಾಲ ಮರುಪಾವತಿ:

ಎಸ್.ಜಿ.ಎಸ್.ವೈ. ಸಾಲವು ಮಧ್ಯಮಾವಧಿ ಸಾಲವಾಗಿದ್ದು ಮರುಪಾವತಿ ಅವಧಿಯು ಕನಿಷ್ಠ 5 ವರ್ಷವಾಗಿರುತ್ತದೆ. ನಿವ್ವಳ ಆದಾಯದ ಶೇ. 50ಕ್ಕಿಂತ ಹೆಚ್ಚಾದ ಕಂತಿನ ಮೊತ್ತವಿರತಕ್ಕದ್ದಲ್ಲ.

## ಸಾಲ ವಸೂಲಾತಿ:

ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗಳು ಸಾಲ ವಸೂಲಾತಿಗೆ ಕಟ್ಟುನಿಟ್ಟಿನ ಕ್ರಮವಹಿಸಬೇಕು. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಬಾಕಿದಾರರ ಪಟ್ಟಿಮಾಡಿ ಸೂಕ್ತ ಕ್ರಮ ಕೈಗೊಂಡು ವಸೂಲಾತಿಗೆ ಕ್ರಮವಹಿಸಬೇಕು. ಬ್ಯಾಂಕುಗಳಿಗೆ ಸಂಬಂಧಿಸಿದ ಇಲಾಖೆಗಳೊಡನೆ ಜಂಟಿ ಪ್ರಯತ್ನ ನಡೆಸಿ ಕಡೆಯ ಕ್ರಮವಾಗಿ ಕಾನೂನು ಕ್ರಮ ಜರುಗಸಬೇಕು.

## ಅನುಷ್ಠಾನ:

ಎಸ್.ಜಿ.ಎಸ್.ವೈ.ಯನ್ನು ಜಿಲ್ಲಾ ಗ್ರಾಮೀಣಾಭಿವೃದ್ಧಿ ಸಂಸ್ಥೆಗಳು ಡಿ.ಆರ್.ಡಿ.ಎ.ಗಳು ಇತರ ಪಂಚಾಯತ್ ರಾಜ್ ಸಂಸ್ಥೆಗಳು, ಬ್ಯಾಂಕುಗಳು, ಸಂಬಂಧಪಟ್ಟ ಇಲಾಖೆಗಳು ಮತ್ತು ಸರ್ಕಾರೇತರ ಸಂಸ್ಥೆಗಳ ಸಕ್ರಿಯೆ ಸಹಭಾಗಿತ್ವದೊಂದಿಗೆ ಅನುಷ್ಠಾನಗೊಳಿಸಲಾಗುತ್ತದೆ. ಈ ಎಲ್ಲಾ ಏಜೆನ್ಸಿಗಳ ನಡುವೆ ನಿಕಟ ಸಮನ್ವಯ ಸಾಧಿಸಲು ಈ ಕೆಳಕಂಡ ಸಮಿತಿಗಳನ್ನು ರಚಿಸಲಾಗಿದೆ.

1. ಬ್ಲಾಕ್ ಮಟ್ಟದ ಎಸ್.ಜಿ.ಎಸ್.ವೈ. ಸಮಿತಿ
2. ಜಿಲ್ಲಾ ಮಟ್ಟದ ಎಸ್.ಜಿ.ಎಸ್.ವೈ. ಸಮಿತಿ
3. ರಾಜ್ಯ ಮಟ್ಟದ ಎಸ್.ಜಿ.ಎಸ್.ವೈ. ಸಮಿತಿ
4. ಕೇಂದ್ರ ಮಟ್ಟದ ಸಮನ್ವಯ ಸಮಿತಿ ಸಿ.ಎಲ್.ಸಿ.ಸಿ.

## ಹೆಚ್ಚಿನ ವಿವರಗಳಿಗೆ ಈ ಕೆಳಕಂಡವರನ್ನು ಸಂಪರ್ಕಿಸಿ:

1. ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ನಿರ್ದೇಶಕರು, ಸ್ವ ಉದ್ಯೋಗ ಕಾರ್ಯಕ್ರಮಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಸನ.
4. ಯೋಜನಾ ನಿರ್ದೇಶಕರು, ಡಿ.ಆರ್.ಡಿ.ಎ. ಕೋಶ, ಜಿಲ್ಲಾ ಪಂಚಾಯತ್, ಹಾಸನ.
5. ಸಹಾಯಕ ಯೋಜನಾಧಿಕಾರಿಗಳು, ಡಿ.ಆರ್.ಡಿ.ಎ. ಕೋಶ, ಜಿಲ್ಲಾ ಪಂಚಾಯತ್, ಹಾಸನ.
6. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಆಲೂರು/ಅರಕಲಗೂಡು/ಅರಸೀಕೆರೆ/ಬೇಲೂರು/ಚನ್ನರಾಯಪಟ್ಟಣ/ಹಾಸನ/ಹೊಳೆನರಸೀಪುರ/ಸಕಲೇಶಪುರ.